ಗ್ರಾಮಾಂತರ ಪ್ರದೇಶದ ಜನತೆಯು ವೈದ್ಯಕೀಯ ಸೌಲಭ್ಯಗಳಿಂದ ವಂಚಿತರಾಗಿರುವುದು.

807 ಶ್ರೀ ಆರ್. ನಾರಾಯಣ (ಬೆಳ್ಳಾವಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ತುಮಕೂರು ಜಿಲ್ಲೆಯಲ್ಲಿ ೧೯೮೭ರಿಂದ ಹೊಸದಾಗಿ ಪ್ರಾಥಮಿಕ ಆರೋಗ್ಯ ಘಟಕಗಳನ್ನು (ಪಿಹೆಚ್‌ಯು) ಮಂಜೂರು ಮಾಡದೆ ಇರುವುದರಿಂದ ಗ್ರಾಮಾಂತರ ಪ್ರದೇಶದ ಜನತೆಯು ವೈದ್ಯಕೀಯ ಸೌಲಭ್ಯದಿಂದ ವಂಚಿತರಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಆ) ಬಂದಿದ್ದರೆ ಗ್ರಾಮಾಂತರ ಪ್ರದೇಶದ ಜನರಿಗೆ ವೈದ್ಯಕೀಯ ಸೌಲಭ್ಯ ಒದಗಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

1) Whether it has come to the notice of Govt. that the people of Rural areas of Tumkur District have been deprived of Medical facilities due to non sanction of P.H.Us. since 1987.

2) If so, what action has been taken by the Govt. to provide Medical Facilities to the people of Rural areas.

ಶ್ರೀಮತಿ ಮಾನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು)—

ಅ) ಇಲ್ಲ.

ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

1) No.

2) Does not arise in view of the adove answer.

ಶ್ರೀ ಆರ್. ನಾರಾಯಣ.— ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಸಹಜವಾದ ಉತ್ತರವನ್ನು ನನ್ನ ಪ್ರಶ್ನೆಗೆ ಒದಗಿಸಿಕೊಟ್ಟಿಲ್ಲ. ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡತಕ್ಕ ಸಂದರ್ಭದಲ್ಲಿ ಆ ಊರಿನ ಪ್ರಜಾ ಸಂಖ್ಯೆಯನ್ನು ಗಮನದಲ್ಲಿಟ್ಟುಕೊಂಡು ಗ್ರಾಮಾಂತರ ಪ್ರದೇಶದಲ್ಲಿ ಕನಿಷ್ಟ ಆರೋಗ್ಯ ಸೌಲಭ್ಯವನ್ನು ಒದಗಿಸಿಕೊಡಬೇಕಾಗಿದೆ. ಆದರೆ ಆ ಯೋಜನೆಯನ್ನು ೧೯೮೭ರಿಂದ ನಿಲ್ಲಿಸಿದ್ದಾರೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದ ಜನರು ಈ ವೈದ್ಯಕೀಯ ಸೌಲಭ್ಯದಿಂದ ವಂಚಿತರಾಗಿದ್ದಾರೆ. ಆದರೆ ಉತ್ತರದಲ್ಲಿ ಆ ರೀತಿಯ ತೊಂದರೆ ಇಲ್ಲ ಎಂದೂ ಹೇಳಿದರೆ ಹೇಗೆ ?

ಅಧ್ಯಕ್ಷರು.— ತಾವು ಪ್ರಶ್ನೆಯನ್ನು ಕೇಳಿ ?

ಶ್ರೀ ಆರ್. ನಾರಾಯಣ.— 'ಇಲ್ಲ' ಎಂದು ಉತ್ತರ ಕೊಟ್ಟಿದ್ದಾರೆ. ಇದು ಸಮಂಜಸವಾದ ಉತ್ತರ ಅಲ್ಲ. ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡಬೇಕಾದರೆ ಇಷ್ಟು ಜನ ಸಂಖ್ಯೆಗೆ ಒಂದರಂತೆ ಎಂಬ ಆಧಾರದ ಮೇಲೆ ಕೊಡುತ್ತಿದ್ದರು. ಅದು ಈಗ ತಡ್ಡಾಗಿದೆ. ಇದರಿಂದ ಗ್ರಾಮೀಣ ಪ್ರದೇಶದ ಜನರಿಗೆ ಏನು ತೊಂದರೆಯಾಗಿದೆ, ಅದಕ್ಕೆ ಬದಲಾಗಿ ಬೇರೆ ವ್ಯವಸ್ಥೆಯನ್ನೇನಾದರೂ ಮಾಡಿದ್ದೀರಾ ? ಮಂತ್ರಿಗಳಿಗೆ ಕೇಳಿದರೆ ಇದನ್ನು ಜಿಲ್ಲಾ ಪರಿಷತ್ತಿನವರು ಮಾಡಬೇಕೆಂದು ಹೇಳುತ್ತಾರೆ. ಮತ್ತೆ ಜಿಲ್ಲಾ ಪರಿಷತ್ತು ಕೇಳಿದರೆ ಮಾಮೂಲು ಉತ್ತರ ಹೊಣ ಇಲ್ಲ ಎಂದು ಬರುತ್ತದೆ.

ಶ್ರೀಮತಿ ಮಾನೋರಮಾ ಮಧ್ವರಾಜ್.— ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಮಂಜೂರು ಮಾಡುವುದಕ್ಕೆ ೧೯೮೩ಕ್ಕಿಂತ ಮೊದಲು ಭಾರತ ಸರ್ಕಾರದ ನಿಯಮದ ಪ್ರಕಾರ ೩೦ ಸಾವಿರ ಜನಸಂಖ್ಯೆಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಹಾಗೂ ೫ ಸಾವಿರ ಜನಸಂಖ್ಯೆಗೆ ಒಂದರಂತೆ ಉಪ ಕೇಂದ್ರವನ್ನು ಸ್ಥಾಪನೆ ಮಾಡುವುದು ಇತ್ತು. ಇಷ್ಟೆಲ್ಲಾ ಆದರೂ ತುಮಕೂರು ಜಿಲ್ಲೆಯಲ್ಲಿ ೧೯೮೭-೮೮ರಲ್ಲಿ ೩೬ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಹಾಗೂ ೩೪ ಉಪ ಕೇಂದ್ರಗಳನ್ನು ಮಂಜೂರು ಮಾಡಲಾಗಿದೆ. ೧೯೮೮–೮೯ರಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳು ೧೯ ಉಪ ಕೇಂದ್ರಗಳು ಇಲ್ಲ. ೧೯೮೯–೯೦ರಲ್ಲಿ ೨೦ ಉಪ ಕೇಂದ್ರಗಳು ಹೀಗೆ ಮಂಜೂರಾತಿ ನೀಡಲಾಗಿದೆ. ಹೀಗಾಗಿ ಹಳ್ಳಿಯ ಜನರಿಗೆ ಪ್ರಾಥಮಿಕ ಆರೋಗ್ಯ ಘಟಕಗಳನ್ನು ಮಂಜೂರು ಮಾಡುವುದು ನಿಲ್ಲಿಸಿರುವುದರಿಂದ ಯಾವ ತೊಂದರೆಯೂ ಆಗಿಲ್ಲ. ಆರೋಗ್ಯ ಕೇಂದ್ರ ಹಾಗೂ ಉಪ ಕೇಂದ್ರವನ್ನು ಕೊಟ್ಟು ಆ ಮೂಲಕ ಜನರ ಆರೋಗ್ಯವನ್ನು ನೋಡಿಕೊಳ್ಳಲಾಗುತ್ತಿದೆ.